# ಶೃಂಗೇರಿ ಶ್ರೀ ಶಾರದಾಪೀಠದಿಂದ ಅಂಗವಿಕಲರಿಗೆ ಸಹಾಯಕ ಉಪಕರಣಗಳ ಉಚಿತ ಕೊಡುಗೆ

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಮೇ. 4ರಿಂದ 11ರವರೆಗೆ ಕುಂದಾಪುರದಲ್ಲಿ ವಾಸ್ತವ್ಯ ಹೂಡಿ, ಶ್ರೀ ಶಂಕರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಿರುವರು. ಈ ಸಂದರ್ಭದಲ್ಲಿ ಅನೇಕ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಏರ್ಪಡಿಸಲಾಗುವುದು.

ನಡೆಯಲು ಅಸಮರ್ಥರಾದ ಅಂಗವಿಕಲರಿಗೆ ಸಹಾಯಕವಾಗುವ ಕೃತಕ ಕಾಲುಗಳು ಮತ್ತು ಮೂರು ಚಕ್ರದ ಸೈಕಲ್‌ಗಳು, ಕಿವಿ ಕೇಳದವರಿಗೆ ಶ್ರವಣ ಸಾಧನ ಮತ್ತು ಕಣ್ಣು ಕಾಣದವರಿಗೆ ನಡೆಯಲು ಅನುಕೂಲವಾಗುವ ವೈಜ್ಞಾನಿಕ ಊರುಗೋಲುಗಳನ್ನು ಶೃಂಗೇರಿ ಶ್ರೀ ಮಠದವತಿಯಿಂದ ಮೇ 9ರ ಅಪರಾಹ್ನ 3.30ಕ್ಕೆ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ಆವರಣದಲ್ಲಿ ಜಗದ್ಗುರುಗಳವರ ದಿವ್ಯ ಸನ್ನಿಧಿಯಲ್ಲಿ ಉಚಿತವಾಗಿ ನೀಡಲಾಗುವುದು.

ಇವುಗಳ ಅವಶ್ಯಕತೆ ಇರುವ ಆರ್ಥಿಕವಾಗಿ ಹಿಂದುಳಿದ ಅರ್ಹ ಫಲಾನುಭವಿಗಳು ತಜ್ಞವೈದ್ಯರ ದೃಢೀಕರಣ ಪತ್ರ, ತಮ್ಮ ಸಮೀಪದ ರೋಟರಿ, ಲಯನ್ ಅಥವಾ ಜೇಸಿಸ್ ಸಂಸ್ಥೆಯ ಅಧ್ಯಕ್ಷರ ಶಿಫಾರಸ್ಸುಪತ್ರ ಹಾಗೂ ಆದಾಯ ದೃಢೀಕರಣ ಪತ್ರದೊಂದಿಗೆ ತಮ್ಮ ವಿಳಾಸ, ಎಲ್ಲ ವಿವರಗಳು ಮತ್ತು ಪಾಸ್‌ಪೋರ್ಟ್ ಗಾತ್ರದ ಒಂದು ಫೋಟೋದೊಂದಿಗೆ ಏ.20ರ ಒಳಗೆ ತಲುಪುವಂತೆ ಕಾರ್ಯದರ್ಶಿ, ಶ್ರೀ ಶಂಕರ ಜಯಂತಿ ಉತ್ಸವ ಸಮಿತಿ, ಶ್ರೀ ಕುಂದೇಶ್ವರ ದೇವಸ್ಥಾನ, ಕುಂದಾಪುರ; 576 201; ಉಡುಪಿ ಜಿಲ್ಲೆ ಇವರಿಗೆ ಅರ್ಜಿ ಸಲ್ಲಿಸಬೇಕು. ಆಯ್ಕೆಯಾದ ಫಲಾನುಭವಿಗಳಿಗೆ ಈ ಕುರಿತು ಮುಂಚಿತವಾಗಿ ತಿಳಿಸಲಾಗುವುದು - ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಕುಂದಾಪುರದಲ್ಲಿ ರಾಜ್ಯ ಮಟ್ಟದ 'ಮಾಣಿಕ್ಯಮಂಜರೀ' ಕಂಠ ಪಾಠ ಸ್ಪರ್ಧೆ

ಕುಂದಾಪುರ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿಯೊಂದಿಗೆ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ನಡೆಯಲಿರುವ ಶ್ರೀ ಶಂಕರ ಜಯಂತಿ ಉತ್ಸವದ ಅಂಗವಾಗಿ ಮೇ 10ರ ಅಪರಾಹ್ನ 3.00ಕ್ಕೆ ರಘುನಾಥ ಸೂರಿ ವಿರಚಿತ 'ಮಾಣಿಕ್ಯಮಂಜರೀ' ಗ್ರಂಥದ ಕಂಠಪಾಠ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ರಾಜ್ಯಮಟ್ಟದ ಈ ಸ್ಪರ್ಧೆಯಲ್ಲಿ ಭಾಗವಹಿಸಿ, ತಪ್ಪಿಲ್ಲದೆ ಕಂಠಪಾಠ ಒಪ್ಪಿಸುವವರಿಗೆ ತಲಾ ರೂ.500/-ರ ಬಹುಮಾನ ನೀಡಲಾಗುವುದು.

ಆಸಕರು 25-04-08ರ ಒಳಗೆ ತಲುಪುವಂತೆ ತಮ್ಮ ಹೆಸರು ವಿಳಾಸ ಮತ್ತು ಇತರ ವಿವರಗಳೊಂದಿಗೆ 'ಕಾರ್ಯದರ್ಶಿ, ಶ್ರೀ ಶಂಕರ ಜಯಂತಿ ಉತ್ಸವ ಸಮಿತಿ; ಶ್ರೀ ಕುಂದೇಶ್ವರ ದೇವಸ್ಥಾನ; ಕುಂದಾಪುರ ಉಡುಪಿ ಜಿಲ್ಲೆ' - ಇವರಲ್ಲಿ ತಮ್ಮ ಹೆಸರು ನೊಂದಾಯಿಸಿಕೊಳ್ಳಬಹುದೆಂದೂ, 'ಮಾಣಿಕ್ಯಮಂಜರೀ' ಪುಸ್ತಕ ಬೇಕಿದ್ದಲ್ಲಿ ಮುಂಚಿತವಾಗಿ ತಿಳಿಸಿದರೆ ಉಚಿತವಾಗಿ ಒದಗಿಸಲಾಗುವುದೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಶೃಂಗೇರಿ ಶ್ರೀಗಳವರಿಂದ ಕುಂದಾಪುರದಲ್ಲಿ ಶಂಕರ ಜಯಂತಿ ಆಚರಣೆ

ಕಳೆದ ಎರಡು ವರ್ಷಗಳಲ್ಲಿ ಅನುಕ್ರಮವಾಗಿ ಉತ್ತರಕನ್ನಡ ಮತ್ತು ಬೆಂಗಳೂರಿನಲ್ಲಿ ಶ್ರೀ ಶಂಕರ ಜಯಂತಿ ಉತ್ಸವವನ್ನು ಆಚರಿಸಿದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಈ ಬಾರಿ ಅವಿಭಕ್ತ ದಕ್ಷಿಣ ಕನ್ನಡದ ಕೇಂದ್ರಗಳಲ್ಲೊಂದಾದ ಕುಂದಾಪುರದಲ್ಲಿ ಇದೇ ಮೊದಲ ಬಾರಿಗೆ ಶ್ರೀ ಶಂಕರಜಯಂತಿ ನೆರವೇರಿಸಲು ಸಂಕಲ್ಪಿಸಿದ್ದಾರೆ.

ಮೇ 6 ರಿಂದ 10ರ ವರೆಗೆ ನಡೆಯುವ ಈ ವಿಶೇಷ ಕಾರ್ಯಕ್ರಮದಲ್ಲಿ ಪ್ರತಿನಿತ್ಯ ಬೆಳಿಗ್ಗೆ ಆಚಾರ್ಯ ಸನ್ನಿಧಿಯಲ್ಲಿ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಚತುರ್ವೇದಗಳು ಮತ್ತು ಪ್ರಸ್ಥಾನತ್ರಯ ಭಾಷ್ಯಾದಿಗಳ ಪಾರಾಯಣ, ವಿವಿಧ ಹೋಮ -ಹವನಗಳು, ಅಪರಾಹ್ನ 3-30ರಿಂದ ಸಾರ್ವಜನಿಕರಿಗಾಗಿ ಶ್ರೀ ಶಂಕರರ ಕುರಿತಾದ ವಿವಿಧ ಸ್ಪರ್ಧೆಗಳು, ಸಂಜೆ 5 ರಿಂದ 7ರ ವರೆಗೆ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ಮತ್ತು ವಿದ್ವಾಂಸರಿಂದ ಉಪನ್ಯಾಸ, 7 ರಿಂದ 8ರವರೆಗೆ ಸದಭಿರುಚಿಯ ಸಾಂಸ್ಕೃತಿಕ ಕಾರ್ಯಕ್ರಮಗಳು, ನಂತರ ಶ್ರೀ ಶಾರದಾ ಚಂದ್ರಮೌಳೀಶ್ವರ ಪೂಜೆ ಹಾಗೂ ಸಮಾರೋಪದ ದಿನವಾದ ಮೇ 10ರ ಸಂಜೆ ನಗರದ ಪ್ರಮುಖ ಬೀದಿಗಳಲ್ಲಿ ಶ್ರೀ ಶಂಕರಾಚಾರ್ಯರ ಆಕರ್ಷಕ ಮೂರ್ತಿಯ ಉತ್ಸವ ಇತ್ಯಾದಿ ನಡೆಯಲಿದೆಯೆಂದು ಶೃಂಗೇರಿ ಶ್ರೀ ಶಾರದಾಪೀಠದ ಪ್ರಾಂತೀಯ ಧರ್ಮಾಧಿಕಾರಿ ಡಾ। ಎಚ್. ವಿ. ನರಸಿಂಹ ಮೂರ್ತಿಯವರು ತಿಳಿಸಿದ್ದಾರೆ.

# ಕುಂದಾಪುರದಲ್ಲಿ ರಾಜ್ಯ ಮಟ್ಟದ ಶಂಕರಜಯಂತಿ ಸ್ಪರ್ಧೆಗಳು

ಕರ್ನಾಟಕ ಸರಕಾರವು ಶ್ರೀ ಶಂಕರಾಚಾರ್ಯರ ಜಯಂತಿಯನ್ನು ತತ್ವಜ್ಞಾನಿಗಳ ದಿನವೆಂದು ಘೋಷಿಸಿದ್ದು, ಅದರ ಆಚರಣೆಯ ಅಂಗವಾಗಿ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ 'ಶ್ರೀ ಶಂಕರ ಜಯಂತ್ಯುತ್ಸವ ಸಮಿತಿ'ಯವರು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿದ್ದಾರೆ.

ಆಸಕರು ಫುಲ್‌ಸ್ಕೇಪ್ ಕಾಗದದಲ್ಲಿ ಹತ್ತು ಪುಟಗಳಿಗೆ ಕಡಿಮೆ ಇಲ್ಲದಂತೆ :ಸನಾತನ ಹಿಂದೂ ಧರ್ಮದ ಪುನರುತ್ಥಾನದಲ್ಲಿ ಶ್ರೀ ಶಂಕರಾಚಾರ್ಯರ ಪಾತ್ರ' ಕುರಿತು ಕನ್ನಡ, ಸಂಸ್ಕೃತ ಅಥವಾ ಇಂಗ್ಲೀಷ್‌ನಲ್ಲಿ ಪ್ರಬಂಧ ಬರೆದು ಏಪ್ರಿಲ್ 20ರ ಒಳಗೆ 'ಡಾ। ಎಚ್. ವಿ. ನರಸಿಂಹಮೂರ್ತಿ, ಕಾರ್ಯದರ್ಶಿ, ಶ್ರೀ ಶಂಕರ ಜಯಂತ್ಯುತ್ಸವ ಸಮಿತಿ, ಕುಂದೇಶ್ವರ ದೇವಸ್ಥಾನ, ಕುಂದಾಪುರ'- ಇವರಿಗೆ ಕಳುಹಿಸಬೇಕು.

ಅಲ್ಲದೆ ಮೇ 6 ರಿಂದ ನಾಲ್ಕು ದಿನಗಳ ಕಾಲ ಅನುಕ್ರಮವಾಗಿ ರಾಜ್ಯಮಟ್ಟದ ಶ್ರೀ ಶಂಕರ ಸ್ತೋತ್ರ ಕಂಠಪಾಠ ಸ್ಪರ್ಧೆ (ಭಜಗೋವಿಂದಂ ಸ್ತೋತ್ರ), ಶ್ರೀ ಶಂಕರರ ಚಿತ್ರ ರಚನಾ ಸ್ಪರ್ಧೆ, ಶ್ರೀ ಶಂಕರರ ಕುರಿತು ರಸಪ್ರಶ್ನೆ (ಕ್ವಿಜ್) ಸ್ಪರ್ಧೆ ಮತ್ತು ಸೌಂದರ್ಯಲಹರಿ ಗಾಯನ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಭಾಗವಹಿಸುವವರು ಏಪ್ರಿಲ್ 25ರ ಒಳಗೆ ಮೇಲ್ಕಂಡ ವಿಳಾಸಕ್ಕೆ ತಮ್ಮ ಹೆಸರು ಮತ್ತು ವಿವರಗಳನ್ನು ಕಳುಹಿಸಿ ನೊಂದಾಯಿಸಿಕೊಳ್ಳಬಹುದು.

ಈ ಎಲ್ಲ ಸ್ಪರ್ಧೆಗಳು ಪ್ರತಿನಿತ್ಯ ಅಪರಾಹ್ನ 3-30ಕ್ಕೆ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ 'ಶ್ರೀ ಶಂಕರ ಕೃಪಾ ಪ್ರವಚನ ಮಂದಿರ'ದಲ್ಲಿ ನಡೆಯಲಿದ್ದು, ಸ್ಪರ್ಧಾ ವಿಜೇತರಿಗೆ ಮೇ 10ರಂದು ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ ನಡೆಯಲಿರುವ ಶ್ರೀ ಶಂಕರ ಜಯಂತಿಯ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಲಾಗುವುದು - ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

---

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

**ಕುಂಜಿಬೆಟ್ಟು, ಉಡುಪಿ - 2.**

**ಶ್ರೀ ಶಾರದಾ ದೇವಸ್ಥಾನದಲ್ಲಿ**

**ತಾ.07-05-2008ರಂದು ಬುಧವಾರ ಅಕ್ಷಯ ತೃತೀಯಾ ಶುಭದಿನದಂದು**

**ಸಂಘದ ಆಶ್ರಯದಲ್ಲಿ**

## ಸಾಮೂಹಿಕ ಉಪನಯನ

ಕಾರ್ಯಕ್ರಮವು ಜರಗಲಿರುವುದು.
ಆಸಕ್ತ ಸಮಾಜ ಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.30-04-2008ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್ (ಫೋನ್ : 2520754)ರಿಗೆ ತಿಳಿಸಲು ಕೋರಲಾಗಿದೆ.

**- ಕಾರ್ಯದರ್ಶಿ**

---

ಶ್ರೀಶಾರದಾ ದೇವಸ್ಥಾನದಲ್ಲಿ
ತಾ.10-05-2008ರ ಶನಿವಾರ
ಸಂಜೆ ಗಂಟೆ 5-30ರಿಂದ

### ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

---

### ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.24-04-2008ರಂದು ಮತ್ತು ಏಪ್ರಿಲ್ ತಿಂಗಳಲ್ಲಿ 22-05-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

---


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ : 2556536 (R), 2555466 (0)**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


---

## ಶ್ರೀಮಠ, ಬಾಳೆಕುದ್ರು, ಹಂಗಾರಕಟ್ಟೆ

### ಸಂಸ್ಕೃತಿ ಶಿಕ್ಷಣ ಶಿಬಿರ

**ಶ್ರೀ ಶ್ರೀ ನೃಸಿಂಹಾಶ್ರಮ ಸ್ವಾಮಿಗಳವರ ನಿರ್ದೇಶನದಲ್ಲಿ 12 ವರ್ಷಗಳಿಗಿಂತ ಮೇಲ್ಪಟ್ಟ ಶಾಲಾ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಶಿಕ್ಷಣ ಶಿಬಿರವನ್ನು ಶ್ರೀಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.**

**ಶಿಬಿರ ದಿನಾಂಕ : 27-04-2008ರಿಂದ 06-05-2008ರವರೆಗೆ**

**(10 ದಿನಗಳು ಪೂರ್ವಾಹ್ನ 9-00 ಸಂಜೆ 5-00ರವರೆಗೆ)**

| | |
|---|---|
| ದಿವ್ಯ ಉಪಸ್ಥಿತಿ | : **ಶ್ರೀ ಶ್ರೀ ನೃಸಿಂಹಾಶ್ರಮ ಸ್ವಾಮಿಗಳವರು** |
| ಶಿಬಿರದ ಉದ್ಘಾಟಕರು | : **ಡಾ। ಎಸ್. ಎನ್. ಪಡಿಯಾರ್** ವಿಶ್ವಸ್ಥರು, ಸೇವಾ ಸಂಗಮ ಟ್ರಸ್ಟ್, ಕುಂದಾಪುರ |
| ಶಿಬಿರಾಧಿಕಾರಿಗಳು | : **ಶ್ರೀ ಬಿ. ನಾಗೇಶ್‌ರಾವ್** ಬಿ.ಎ.ಬಿ.ಎಡ್. |
| ಶಿಬಿರದ ಉದ್ದೇಶ | : **ಭಾರತೀಯ ಸಂಸ್ಕೃತಿ ಮತ್ತು ದೇಶ ಭಕ್ತಿಯನ್ನು ಜಾಗೃತಗೊಳಿಸುವುದು. ವ್ಯಕ್ತಿತ್ವ ವಿಕಸನ ಮತ್ತು ಉತ್ತಮ ನಾಗರಿಕರ ನಿರ್ಮಾಣ** |
| ಶಿಕ್ಷಣದ ವಿಷಯಗಳು | : **ಯೋಗ-ಧ್ಯಾನ-ಪ್ರಾಣಾಯಾಮ-ಏಕಾಗ್ರತೆ-ಆರೋಗ್ಯ ನಿಯಾಮಾವಳಿಗಳು-ಪ್ರಥಮ ಚಿಕಿತ್ಸೆಗಳು-ವೇದಗಣಿತ-ಮೌಲ್ಯಶಿಕ್ಷಣ-ಸಂಸ್ಕೃತ ಸುಭಾಷಿತಗಳು-ಸ್ತೋತ್ರಗಳು-ಅಭಿನಯ-ನಾಯಕತ್ವ ತರಬೇತಿ ಶಿಬಿರ ಇತ್ಯಾದಿ.** |

ಶಿಬಿರಾರ್ಥಿಗಳಿಗೆ ಉಚಿತ ಊಟ ಉಪಹಾರದ ವ್ಯವಸ್ಥೆ ಇದೆ.
ಶಿಬಿರದಲ್ಲಿ ರಾತ್ರಿ ಉಳಕೊಳ್ಳುವ ವ್ಯವಸ್ಥೆ ಇರುವುದಿಲ್ಲ. ಶಿಬಿರಾರ್ಥಿಗಳು ದಿನಾಂಕ 27-04-2008ರಂದು ತಮ್ಮ ಹೆತ್ತವರೊಂದಿಗೆ ಹಾಜರಾಗಬೇಕಾಗಿ ವಿನಂತಿ.

**ಡಾ। ಬಿ.ಎಂ. ಸೋಮಯಾಜಿ**
ಅಧ್ಯಕ್ಷರು

**ಶ್ರೀ ಬಿ.ಎಂ. ಭಟ್**
ಕಾರ್ಯಾಧ್ಯಕ್ಷರು

**ಸಂಪರ್ಕಕ್ಕಾಗಿ : 94803 46122, 98452 43619**